ಮಾಡಲು ಕಾರಣಕರ್ತರಾಗಿದ್ದು ಔಷಧ ನಿಯಂತ್ರಣ ಕಾಯಿದೆ ಮತ್ತು ಔಷಧ ನಿಯಂತ್ರಣ ನಿಯಮಗಳನ್ವಯ ಕಾರ್ಯ ನಿರ್ವಹಿಸದೇ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಇವರುಗಳನ್ನು ತಕ್ಷಣ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದರೊಂದಿಗೆ ಈ ಅವ್ಯವಹಾರದ ಬಗ್ಗೆ ಕೂಲಂಕುಷವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಲೋಕಾಯುಕ್ತ ವಿಚಾರಣೆಗೊಳಪಡಿಸಲು ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುವರು

1 ಶ್ರೀ ಆರ್ ಆನಂದರಾಜಶೇಖರ್, ಹಿಂದಿನ ಔಷಧ ನಿಯಂತ್ರಕರು
2 ಶ್ರೀ ಹೆಚ್ ಜಯರಾಂ, ಅಪರ ಔಷಧ ನಿಯಂತ್ರಕರು
3 ಶ್ರೀ ಬಿ ಜೆ ಪ್ರಭಾಕುಮಾರ್, ಉಪ ಔಷಧ ನಿಯಂತ್ರಕರು

ಇ) ಈ ಕೆಳಕಂಡ ಅಧಿಕಾರಿಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ

1) ಶ್ರೀ ಆರ್ ಆನಂದರಾಜಶೇಖರ ಹಿಂದಿನ ಔಷಧ ನಿಯಂತ್ರಕರು,
2) ಶ್ರೀ ಹೆಚ್ ಜಯರಾಂ, ಅಪರ ಔಷಧ ನಿಯಂತ್ರಕರು,
3) ಶ್ರೀ ಬಿ ಜೆ ಪ್ರಭಾಕುಮಾರ್‌ರವರಿಗೆ ಉಪ ನಿಯಂತ್ರಕರು

ಇವರುಗಳನ್ನು ದಿನಾಂಕ 1 10 2003ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ ಹಾಗೂ ಸುದೀರ್ಘ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿದೆ ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದ್ದು ವಿಚಾರಣಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಈ) ಮಾನ್ಯ ಲೋಕಾಯುಕ್ತರ ಶಿಫಾರಸ್ಸು ಗಳನ್ವಯ ಮೇಲ್ಕಂಡ ಅಧಿಕಾರಿಗಳನ್ನು ಈಗಾಗಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ ಹಾಗೂ ಪ್ರಕರಣದ ಕೂಲಂಕುಷ ಇಲಾಖಾ ವಿಚಾರಣೆ ನಡೆಸಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿದೆ ವಿಚಾರಣಾ ವರದಿಯನ್ನು ಮಾನ್ಯ ಲೋಕಾಯುಕ್ತರಿಂದ ನಿರೀಕ್ಷಿಸಲಾಗುತ್ತಿದೆ ಔಷಧ ನಿಯಂತ್ರಣ ಇಲಾಖೆಯ ಸುಧಾರಣೆಯ ಬಗ್ಗೆ ಕ್ರಮ ತೆಗೆದುಕೊಳ್ಳಲು ಔಷದ ನಿಯಂತ್ರಕರಿಗೆ ಸೂಚನೆಗಳನ್ನು ನೀಡಲಾಗಿದೆ

ನಾಗಮಂಗಲ ತಾಲ್ಲೂಕಿನ ಸಹ ಶಿಕ್ಷಕರ ವಿರುದ್ಧ ಸಾರ್ವಜನಿಕರ ದೂರು

208 (116) ಶ್ರೀ ಚೆಲುವರಾಯ ಸ್ವಾಮಿ ಎಸ್ (ನಾಗಮಂಗಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ಮತ ಕ್ಷೇತ್ರದಲ್ಲಿ ಸಹಶಿಕ್ಷಕರ ಮೇಲೆ ಸಾರ್ವಜನಿಕರಿಂದ ದೂರು ಇದ್ದು ಹಲವಾರು ಬಾರಿ ಅಮಾನತ್ತುಗೊಂಡಿದ್ದು, ಇವರ ಮೇಲೆ ಪುನ ದಾಖಲೆಗಳ ಸಮೇತ ಸಂಬಂಧಪಟ್ಟ ಆಯುಕ್ತರು, ಕಾರ್ಯದರ್ಶಿ ಶಿಕ್ಷಣ ಇಲಾಖೆ ಇವರಿಗೆ ದೂರು ನೀಡಿದ್ದರೂ ಇವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು

ಆ) ನಾಗಮಂಗಲ ಮತ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣಾಧಿಕಾರಿಗಳು ಕಳೆದ ಮೂರು ವರ್ಷಗಳಿಂದ ವಿವಿಧ ಸಂದರ್ಭಗಳಲ್ಲಿ ಕಾನೂನಿನ ಚೌಕಟ್ಟು ಬಿಟ್ಟು ಮತ್ತು ಇಲಾಖೆಯ ಉನ್ನತ ಅಧಿಕಾರಿಗಳ ಗಮನಕ್ಕೆ ಬಾರದೆ ಅನೇಕ ತಪ್ಪುಗಳಲ್ಲಿ ಭಾಗಿಯಾಗಿರುತ್ತಾರೆ ಈ ಪ್ರಕರಣಗಳು ಜಿಲ್ಲಾ ಪಂಚಾಯಿತಿ ಗಮನಕ್ಕೆ ಬಂದಿದ್ದರೂ ಇವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು

ಇ) ನಾಗಮಂಗಲ ಮತ ಕ್ಷೇತ್ರದಲ್ಲಿ ಪ್ರೌಢಶಿಕ್ಷಣ ಪ್ರಾಥಮಿಕ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ವಿದ್ಯಾರ್ಥಿಗಳಿಗೆ ಕೊರಡಿಯ ಕೊರತೆ,

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ) ಶ್ರೀ ಸಿ ಜೆ ಕುಮಾರ್ ಸಹಶಿಕ್ಷಕರ, ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ ನಾಗಮಂಗಲ, ಮಂಡ್ಯ ಜಿಲ್ಲೆ ಇವರ ಮೇಲೆ ಮಾತ್ರ ಸ್ಥಳೀಯ ಶಾಸಕರು ದಾಖಲೆಗಳ ಸಮೇತ ದೂರು ಕೊಟ್ಟಿರುತ್ತಾರೆ ಈ ದೂರುಗಳ ಬಗ್ಗೆ ಸದರಿ ಶಿಕ್ಷಕರ ಮೇಲೆ ಶಿಸ್ತು ಕ್ರಮ ಹೂಡಲಾಗಿದೆ ಇದನ್ನು ಹೊರತುಪಡಿಸಿ, ಮತ್ಯಾವ ಪ್ರಕರಣ ಇರುವುದಿಲ್ಲ

ಆ) ಈ ಬಗ್ಗೆ ಮಂಡ್ಯ ಜಿಲ್ಲಾ ಪಂಚಾಯಿತಿಗೆ ದೂರು ಬಂದಿದ್ದು, ಜಿಲ್ಲಾ ಪಂಚಾಯತ್ ನಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ಅವರಿಂದ ವಿವರಣೆ ಪಡೆದು ಪರಿಶೀಲಿಸಿದ ನಂತರ, ಸೂಕ್ತ ಎಚ್ಚರಿಕೆ ನೀಡಲಾಗಿದೆ

ಇ) ಕೊರಡಿಗಳ ಕೊರತೆ ಇರುವ ಕಿರಿಯ ಪ್ರಾಥಮಿಕ ಶಾಲೆ– 23 ಹಿರಿಯ ಪ್ರಾಥಮಿಕ ಶಾಲೆ 83 ಸರ್ಕಾರಿ ಪ್ರೌಢಶಾಲಗಳ ಸಂಖ್ಯೆ 08 ಪದವಿ ಪೂರ್ವ ಕಾಲೇಜು – 02

ದಿನಾಂಕ 8 1 2004 ರ ಚುಕ್ಕೆಗುರುತಿನ ಪ್ರಶ್ನೋತ್ತರಗಳು

ಬಾಗೇಪಲ್ಲಿ ತಾಲ್ಲೂಕು ಚಾಕವೇಲು ಗ್ರಾಮದ ಪಶು ಚಿಕಿತ್ಸಾ ಕೇಂದ್ರದ ದುರವಸ್ಥೆ

31 (133) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕು ಚಾಕವೇಲು ಗ್ರಾಮದಲ್ಲಿ ಪಶುಚಿಕಿತ್ಸಾ ಕೇಂದ್ರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ) ಪಶುಚಿಕಿತ್ಸಾಲಯದಲ್ಲಿ ವೈದ್ಯರು ಸೇರಿ ಇತರೆ ಸಿಬ್ಬಂದಿ ವರ್ಗದವರು ಇರಬೇಕಾದ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು

ಇ) ಸದರಿ ಪಶುಚಿಕಿತ್ಸಾಲಯದಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿ ಇಲ್ಲವೆಂದು ಅಲ್ಲಿನ ಸುತ್ತಮುತ್ತಲಿನ ಪಶುಪಾಲಕರು ಮೂಕಪ್ರಾಣಿಗಳಿಗೆ ಶುಶ್ರೂಷೆ ಇಲ್ಲದೆ ನೊಂದು ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಬಂದಿದೆ

ಆ) ಕ್ರ ಸಂ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಭರ್ತಿ	ಖಾಲಿ
1	ಪಶುವೈದ್ಯಾಧಿಕಾರಿ	1	–	1
2	ಪಶುವೈದ್ಯಕೀಯ ಸಹಾಯಕರು	1	1	–
3	ಡಿ ದರ್ಜೆ	2	2	–
	ಒಟ್ಟು	4	3	1